ದಿ.17.03.2022 ರಂದು ಸಾಕ್ಷಿಯನ್ನು ಮತ್ತೆ ಕರೆಸಿ ಪ್ರಮಾಣವಚನ ಬೋದಿಸಲಾಯ್ತು.

**ಪಾಟೀ ಸವಾಲುಃ 5 ಮತ್ತು 6ನೇ ಆರೋಪ ಪರ ಶ್ರೀ ಎಸ್ ಎಸ್ ವಕೀಲರಿಂದಃ**

9. ನಮ್ಮ ಮನೆಯಲ್ಲಿ ನಾನು, ನನ್ನ ತಾಯಿ ಹಾಗೂ ಇಬ್ಬರು ಮಕ್ಕಳು ಇರುತ್ತೇವೆ. ನಮ್ಮ ಮನೆ ಹಾಗೂ ಚಾಸಾ-1ರವರ ಮನೆ ಮಧ್ಯೆ ಖಾಲಿ ಸ್ಥಳ ಇದೆ. ಸುಮಾರು 200 ಅಡಿಗಳಷ್ಟು ದೂರ ಇದೆ. ನಮ್ಮ ಮನೆಯ ಬಾಗಿಲು ಪೂರ್ವದ ದಿಕ್ಕಿಗೆ ಚಾಸಾ-1ರವರ ಮನೆಯ ಬಾಗಿಲು ನಂದಿ ದಿಕ್ಕಿಗೆ (ಉತ್ತರ) ಇದೆ. ನಮ್ಮ ಮನೆಯ ಪಕ್ಕದಲ್ಲಿ ಚಾಸಾ-4ರವರ ಮನೆ ಇದೆ.

10. ನಾನು ವ್ಯವಸಾಯ ಮಾಡಿಕೊಂಡು ಜೀವನ ಮಾಡುತ್ತಿದ್ದೇನೆ. ನನಗೆ ಎರಡು ಎಕರೆ ಜಮೀನು ಇದೆ. ಸದರಿ ಜಮೀನು ನಮ್ಮ ಮನೆಯ ಉತ್ತರ ದಿಕ್ಕಿಗೆ ಇದೆ. ಜಮೀನು ಮನೆಯಿಂದ ಒಂದು ಫರ್ಲಾಂಗ್ ದೂರ ಇದೆ. ಜಮೀನು ನಮ್ಮ ಮನೆಯ ಬಾಗಿಲಿನಲ್ಲಿ ನಿಂತರೆ ಕಾಣಿಸುವುದಿಲ್ಲ. ಗಲಾಟೆಯಾಗಿದೆ ಎಂದು ಹೇಳುವ ಸಮಯದಲ್ಲಿ ಜಮೀನಿನಲ್ಲಿ ಆಲುಗಡ್ಡೆ ಬೆಳೆ ಇತ್ತು. ಜಮೀನಿನ ಸರ್ವೆ ನಂಬರ್ 4-1, 1 ಎಕರೆ 20 ಗುಂಟೆ ಇದೆ. ಜಮೀನಿನಲ್ಲಿ ಬೋರ್‌ವೆಲ್ ಇದೆ. ಜಮೀನಿಗೆ ಬೆಳಗ್ಗೆ 06.00ರಿಂದ 06.30ರ ಸಮಯಕ್ಕೆ ಹೋಗುತ್ತೇನೆ. ಬೆಳಗ್ಗೆ 10.30ರಿಂದ 11.00 ಗಂಟೆಗೆ ವಾಪಸ್ಸು ಬರುತ್ತೇನೆ. ನಮ್ಮ ಜಮೀನಿಗೆ ನಮ್ಮ ಮನೆ ದಕ್ಷಿಣಕ್ಕೆ ಬರುತ್ತದೆ ಎಂದರೆ ಸರಿ. ನಮ್ಮ ಜಮೀನು ಹಾಗೂ ಮನೆಯ ಮಧ್ಯೆ ಸಂಸಾರಸ್ಥರ ಮನೆಗಳು ಇವೆ.

11. ಘಟನೆ ಸಮಯದಲ್ಲಿ ನನ್ನ ಬಳಿ ಮೊಬೈಲ್ ಇರಲಿಲ್ಲ. ನನ್ನ ತಾಯಿ ಹಾಗೂ ಹೆಂಡತಿಯ ಹತ್ತಿರವೂ ಘಟನೆ ಸಮಯದಲ್ಲಿ ಮೊಬೈಲ್ ಇರಲಿಲ್ಲ. ನಮ್ಮ ಊರಿನಲ್ಲಿ ಶಿವನ

ದೇವಸ್ಥಾನ ಇರುವುದಿಲ್ಲ ಶನಿ ಮಹಾತ್ಮನ ದೇವಸ್ಥಾನ ಇದೆ. ಶಿವರಾತ್ರಿ ದಿನ ಶನಿ ಮಹಾತ್ಮ ದೇವಸ್ಥಾನದಲ್ಲಿ ವಿಶೇಷ ಪೂಜೆ ಮಾಡುತ್ತಾರೆ. ಊರಿನ ಹಿರಿಯರು ಸೇರಿ ವಿಶೇಷ ಪೂಜೆ ಮಾಡುತ್ತಾರೆ ಎಂದರೆ ಸರಿ ದೇವಸ್ಥಾನದಲ್ಲಿ ಘಟನಾ ಸಮಯದಲ್ಲಿ ಮೈಕ್ ಸೆಟ್ ಇತ್ತು ಎಂದರೆ ಸರಿಯಲ್ಲ. ಶಿವರಾತ್ರಿಯ ಹಿಂದಿನ ದಿನ ಹಾಗೂ ಮರುದಿನ ಊರಿನ ಜನರು ದೇವಸ್ಥಾನಕ್ಕೆ ಬಂದು ಪೂಜೆಗಳನ್ನು ಮಾಡಿಸಿಕೊಂಡು ಹೋಗುತ್ತಾರೆ ಎಂದರೆ ಸರಿ.

12. ಶನಿ ಮಹಾತ್ಮ ದೇವಸ್ಥಾನ ನಮ್ಮ ಮನೆಯ ಉತ್ತರದ ದಿಕ್ಕಿನಲ್ಲಿ ಹತ್ತು ಅಡಿ ಅಂತರದಲ್ಲಿ ಇದೆ. ನಮ್ಮ ಮನೆ ಹಾಗೂ ದೇವಸ್ಥಾನದ ಮಧ್ಯದಲ್ಲಿ ಸರ್ಕಾರಿ ರಸ್ತೆ ಇದೆ. ಸದರಿ ರಸ್ತೆಯಲ್ಲಿ ದೇವನಹಳ್ಳಿಯಿಂದ ಹೋಗಿ ಬರುವ ವಾಹನಗಳು, ಬಸ್ಸುಗಳು ಆಡ್ಡಾಡುತ್ತವೆ ಎಂದರೆ ಸರಿಯಲ್ಲ. ನಮ್ಮ ಗ್ರಾಮ ಕುಂದಾಣ ಪಂಚಾಯ್ತಿಯಲ್ಲಿ ಬರುತ್ತದೆ. ಕುಂದಾಣಕ್ಕೆ ಹೋಗಬೇಕಾದರೆ ನಮ್ಮ ಮನೆಯ ರಸ್ತೆಯಲ್ಲಿ ಹೋಗಬೇಕು.

13. ಘಟನೆಗೂ ಮುಂಚೆ ವಿಶ್ವನಾಥಪುರ ಪೋಲಿಸ್ ಠಾಣೆಗೆ ಹೋಗಿರಲಿಲ್ಲ ಆದರೆ ರಸ್ತೆಯಲ್ಲಿ ಹೋಗುವಾಗ ನೋಡಿದ್ದೇನೆ. ದೇವನಹಳ್ಳಿಯಿಂದ ನಮ್ಮೂರಿಗೆ ಬರುವ ದಾರಿಯ ಎಡಗಡೆಯಲ್ಲಿ ವಿಶ್ವನಾಥಪುರ ಪೋಲಿಸ್ ಠಾಣೆ ಇದೆ ಎಂದರೆ ಸರಿ. ದೊಡ್ಡಬಳ್ಳಾಪುರದಿಂದ ದೇವನಹಳ್ಳಿಗೆ ಹೋಗುವ ರಾಷ್ಟ್ರೀಯ ಹೆದ್ದಾರಿಗೆ ನಮ್ಮೂರಿನಿಂದ ಹೋದರೆ ವಿಶ್ವನಾಥಪುರ ಪೋಲಿಸ್ ಠಾಣೆ ಸಿಗುತ್ತದೆ ಎಂದರೆ ಸರಿ.

14. ದಿಃ12.02.2010 ಯಾವ ದಿನ ಎಂದು ಗೊತ್ತಿಲ್ಲ ಆದರೆ ಶಿವರಾತ್ರಿ ಇತ್ತು, ಸದರಿ ದಿನ 10 ಗಂಟೆಗೆ ದೇವನಹಳ್ಳಿಯ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆನು. ಸದರಿ ದಿನ ಆಸ್ಪತ್ರೆಯಿಂದ ಊರಿಗೆ ಬಂದಿರಲಿಲ್ಲ ಮರುದಿನ ಬಂದಿದ್ದೆನು. ನಾನು ಸರ್ಕಾರಿ ಆಸ್ಪತ್ರೆಗೆ ಹೋದ ದಿನ ವೈದ್ಯರು

ಇದ್ದರು ನನ್ನನ್ನು ಪರೀಕ್ಷೆ ಮಾಡಿದ್ದರು ಕೂಲಂಕುಷವಾಗಿ ವಿಚಾರಿಸಿದ್ದರು. ಸದರಿ ಆಸ್ಪತ್ರೆಗೆ ವಿಶ್ವನಾಥಪುರ ಪೋಲಿಸ್ ಠಾಣೆ ಪೋಲಿಸರು ಬಂದು ಹೋಗುತ್ತಿದ್ದರು. ಆಸ್ಪತ್ರೆಯಲ್ಲಿ ಪೋಲಿಸ್ ಪೇದೆ, ಪೋಲಿಸ್ ಮುಖ್ಯ ಪೇದೆ, ಪೋಲಿಸ್ ಇನ್ಸ್‌ಪೆಕ್ಟರ್, ಪೋಲಿಸ್ ಸಬ್ ಇನ್ಸ್‌ಪೆಕ್ಟರ್‌ರವರು ಬಂದು ಹೋಗುವುದನ್ನು ನೋಡಿದ್ದೇನೆ. ಅವರುಗಳು ನನ್ನನ್ನು ಆಸ್ಪತ್ರೆಯಲ್ಲಿ ವಿಚಾರ ಮಾಡಿದ್ದರು. ಆ ಸಮಯದಲ್ಲಿ ನನಗೆ ಗಲಾಟೆಯಾಗಿ ಏಟಾಗಿತ್ತು ಸಂಪೂರ್ಣ ವಿಚಾರಗಳು ಗೊತ್ತಿತ್ತು, ಸದರಿ ಘಟನೆಯ ವಿಚಾರವನ್ನು ಪಿಎಸ್‌ಐರವರಿಗೆ ಹೇಳಿದ್ದೆನು. ನನ್ನ ಹೆಸರು ಹಾಗೂ ವಿವರವನ್ನು ಬರೆದುಕೊಂಡಿದ್ದರು. ಆಸ್ಪತ್ರೆಯಲ್ಲಿ ಪೋಲಿಸರು ನನ್ನ ಸಹಿ ಪಡೆದಿಲ್ಲ, ಪೋಲಿಸರು ಆಸ್ಪತ್ರೆಯಲ್ಲಿ ನನ್ನನ್ನು ವಿಚಾರಿಸಿ ಹೇಳಿಕೆ ಪಡೆದು ಸಹಿ ಪಡೆದಿದ್ದರು ಎಂದರೆ ಸರಿಯಲ್ಲ, ಅದೇ ದಿನ ಹೇಳಿಕೆಗೆ ತೊಂದರೆ ಇರಲಿಲ್ಲ ಎಂದರೆ ಪೋಲಿಸರು ಕೇಳಿರಲಿಲ್ಲ ನಾನು ಸಹಿ ಮಾಡಿರಲಿಲ್ಲ.

15. ದಿ:12.02.2010ರಂದು ದೇವನಹಳ್ಳಿ ಆಸ್ಪತ್ರೆಯಲ್ಲಿ ನನ್ನನ್ನು ಒಳರೋಗಿಯಾಗಿ ದಾಖಲು ಮಾಡಿಕೊಂಡಿದ್ದರು. ನಾನು, ಚಾಸಾ-1, 2 ಹಾಗೂ ಮೂವರು ಮೃತರು ದೇವನಹಳ್ಳಿ ಆಸ್ಪತ್ರೆಗೆ 10 ಗಂಟೆ ಸಮಯದಲ್ಲಿ ಆಸ್ಪತ್ರೆಗೆ ಹೋಗಿದ್ದೆವು. ವೈದ್ಯರು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದ ನಂತರ ಗಲಾಟೆ ಹೇಗೆ ಆಗಿದೆ ಯಾರು ಮಾಡಿದರು ಏಕೆ ಆಗಿದೆ ಎಂದು ವಿಚಾರಿಸಿದ್ದರು ಎಂದರೆ ಸರಿ. ಗಾಯಮಾಡಿದವರ ಹೆಸರುಗಳನ್ನು ವೈದ್ಯರಿಗೆ ಹೇಳಿದ್ದೆನು. ನಾನು ಹೇಳಿದ್ದನ್ನು ವೈದ್ಯರು ಬರೆದುಕೊಂಡಿರುವ ಬಗ್ಗೆ ನನಗೆ ಗೊತ್ತಿಲ್ಲ, ವೈದ್ಯರು ನನ್ನ ಸಹಿಯನ್ನು ರಿಜಿಸ್ಟರ್ ನಲ್ಲಿ ಪಡೆದಿರುವುದಿಲ್ಲ, ದೇವನಹಳ್ಳಿ ಸರ್ಕಾರಿ ಆಸ್ಪತ್ರೆ ಕುರಿತು ಘಟನೆಯ ಮೂರು ವರ್ಷಗಳಿಂದ ಮುಂಚೆ ಗೊತ್ತು, ದೇವನಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಸ್ತ್ರೀ ಹಾಗೂ ಪುರುಷರ ಪ್ರತ್ಯೇಕ ವಾರ್ಡ್‌ಗಳು ಇವೆ. ನನ್ನನ್ನು ವಾರ್ಡ್‌ನಲ್ಲಿ ದಾಖಲಿಸಿದ್ದರು. ನನ್ನನ್ನು ಆಸ್ಪತ್ರೆಯಿಂದ ಮರುದಿನ ಮಧ್ಯಾಹ್ನ 01.30ರಿಂದ 02.00 ಗಂಟೆ ಸಮಯದಲ್ಲಿ ಡಿಸ್ಚಾರ್ಜ್ ಮಾಡಿದ್ದರು. ಆ

ಸಮಯದಲ್ಲಿ ವೈದ್ಯರು ನನ್ನ ಸಹಿ ಪಡೆದಿರುವುದಿಲ್ಲ, ನಾನು ಒಳರೋಗಿಯಾಗಿ ದಾಖಲಾಗಿದ್ದ ಸಮಯದಲ್ಲಿ ವೈದ್ಯರು ಹಾಗೂ ದಾದಿಯರು ಬಂದು ವಿಚಾರಿಸಿ ಔಷದೋಪಚಾರ ಮಾಡುತ್ತಿದ್ದರು ಎಂದರೆ ಸರಿ.

16. ದೇವನಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ಇದ್ದಾಗ ವಿಶ್ವನಾಥಪುರ ಪೋಲಿಸರು, ಪಿಎಸ್ಐ, ಸಿಪಿಐ, ಎಸ್‌ಪಿ ಹಾಗೂ ಡಿವೈಎಸ್‌ಪಿರವರು ಬಂದು ವಿಚಾರಿಸಿಕೊಂಡು ಹೋಗಿದ್ದರು ಎಂದರೆ ಸರಿ. ಆಸ್ಪತ್ರೆಯಲ್ಲಿ ನನ್ನ ಹೇಳಿಕೆ ಪಡೆದಿರಲಿಲ್ಲ ಆಸ್ಪತ್ರೆಯಲ್ಲಿ ಡಿಸ್ಚಾರ್ಜ್ ಆಗುವ ಮುಂಚೆ ನನ್ನ ಹೇಳಿಕೆ ಪಡೆದಿರಲಿಲ್ಲ, ಗಲಾಟೆಯಾಗಿ ಎರಡು ದಿನಗಳ ನಂತರ ನನ್ನ ಹೇಳಿಕೆ ಪಡೆದಿದ್ದರು. ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆಯುವಾಗ ವಿಶ್ವನಾಥಪುರ ಪೋಲಿಸರು ಕಾವಲಿಗಾಗಿ ಇದ್ದರು. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ನನಗೆ ಜ್ಞಾನ ಇತ್ತು ಹಾಗೂ ಮಾತನಾಡುವ ಸ್ಥಿತಿಯಲ್ಲಿದ್ದೆನು.

17. ಆಸ್ಪತ್ರೆಯಿಂದ ಮರುದಿನ ಊರಿಗೆ ಹೋಗಿರಲಿಲ್ಲ ಒಂದು ಟೆಂಪೋ ಮಾಡಿಕೊಂಡು ಮೂವರು ತೀರಿದ್ದರಿಂದ ಸ್ಮಶಾನಕ್ಕೆ ಹೋಗಿದ್ದೆವು. ಸ್ಮಶಾನಕ್ಕೆ ಹೋಗಿ ಅಂತ್ಯಕ್ರಿಯೆ ಮಾಡಿದ ನಂತರ ಸಂಜೆ 05.00 ಗಂಟೆಯ ನಂತರ ಮನೆಗೆ ಹೋಗಿದ್ದೆನು. ನಾನು ಊರಿಗೆ ಹೋದ ನಂತರವೂ ವಿಶ್ವನಾಥಪುರ ಪೋಲಿಸರು, ಪಿಎಸ್ಐ, ಪಿಐ, ಸಿಪಿಐ ಹಾಗೂ ಇತರೆ ಸಿಬ್ಬಂದಿಗಳು ಊರಿನಲ್ಲಿ ಇದ್ದರು ಎಂದರೆ ಸರಿ. ನನಗೆ ಗಾಯಗಳು ಆಗಿದ್ದು ಬಟ್ಟೆಗಳು ರಕ್ತವಾಗಿದ್ದು ಘಟನೆಯ ತಕ್ಷಣವೇ ಪೋಲಿಸರಿಗೆ ಘಟನೆಯ ವಿಚಾರವನ್ನು ಹೇಳಬೇಕೆಂದೆನಿಸಿತ್ತು ಪೋಲಿಸರಿಗೆ ಹೇಳಿದ್ದೇನೆ. ಸ್ಮಶಾನದಲ್ಲಿ ಅಂತ್ಯಕ್ರಿಯೆ ಮುಗಿಸುವ ಮುಂಚೆಯೇ ಘಟನೆಯ ಸಂಪೂರ್ಣ ವಿವರಗಳನ್ನು ಪೋಲಿಸರಿಗೆ ತಿಳಿಸಿದ್ದೆನು. ಅಂತ್ಯಕ್ರಿಯೆ ಮುಗಿದ ನಂತರ ಮರುದಿನದವರೆಗೂ ನಾನು ಮನೆಯಲ್ಲಿಯೇ ಇದ್ದೆನು ಎಂದರೆ ಸರಿ.

18. ಅಂತ್ಯಕ್ರಿಯೆ ನಡೆದ ಮರುದಿನವೂ ಪೋಲಿಸರು ನಮ್ಮ ಮನೆಯ ಬಳಿ ಇದ್ದರು ಎಂದರೆ ಸರಿ ಪೋಲಿಸರ ಹುದ್ದೆಗಳು ನನಗೆ ಗೊತ್ತಿಲ್ಲ. ಸದರಿ ಪೋಲಿಸರು ಘಟನೆ ಎಲ್ಲಿ ಆಗಿತ್ತು ಹೇಗೆ ಆಗಿತ್ತು ಗಾಯಗಳನ್ನು ತೋರಿಸುವಂತೆ ನನ್ನನ್ನು ಕೇಳಿರಲಿಲ್ಲ. ಸದರಿ ಪೋಲಿಸರು ಘಟನೆಯ ಸ್ಥಳವನ್ನು ಕೇಳಿದ್ದರೆ ನಾನು ತೋರಿಸುತ್ತಿದ್ದೆ.

19. ನಾನು ದಿಃ12.02.2010ರಂದು ಆಸ್ಪತ್ರೆಗೆಸ ಹೋದಾಗ ಮೈಮೇಲೆ ಹಾಕಿದ್ದ ಬಟ್ಟೆಗಳು ರಕ್ತವಾಗಿದ್ದವು. ವೈದ್ಯರು ರಕ್ತವಾಗಿದ್ದ ಬಟ್ಟೆಗಳನ್ನು ನೋಡಿದ್ದಾರೆ. ವೈದ್ಯರು ನನ್ನನ್ನು ವಾರ್ಡಿಗೆ ವರ್ಗಾಯಿಸುವಾಗ ನನ್ನ ಬಟ್ಟೆಗಳನ್ನು ಕವರ್ ನಲ್ಲಿ ಹಾಕಿಸಿ ಬೇರೆ ಬಟ್ಟೆಗಳನ್ನು ನೀಡಿದ್ದರು. ವೈದ್ಯರು ನನ್ನ ಬಟ್ಟೆಗಳನ್ನು ಜಪ್ತಿಪಡಿಸಿಕೊಂಡಿರಲಿಲ್ಲ ನನ್ನ ಬಳಿ ಇತ್ತು. ರಕ್ತವಾಗಿದ್ದ ಬಟ್ಟೆಗಳು ಮರುದಿನ ಡಿಸ್ಚಾರ್ಜ್ ಆಗುವವರೆಗೂ ವೈದ್ಯರ ಬಳಿ ಇದ್ದವು ಎಂದರೆ ಸರಿಯಲ್ಲ ಕವರ್ ನಲ್ಲಿ ನಾನೇ ಇಟ್ಟುಕೊಂಡಿದ್ದೆ. ಪೋಲಿಸರು ಆಸ್ಪತ್ರೆಗೆ ಭೇಟಿ ನೀಡಿದಾಗ ರಕ್ತವಾಗಿದ್ದ ಬಟ್ಟೆಗಳನ್ನು ನೋಡಿದ್ದರು ಆದರೆ ವಶಕ್ಕೆ ಪಡೆದಿರಲಿಲ್ಲ.

20. ಘಟನೆ ಸಮಯದಲ್ಲಿ ನನಗೆ ಮದುವೆ ಆಗಿರಲಿಲ್ಲ. ಘಟನೆ ಕುರಿತು ನನ್ನ ತಾಯಿಗೆ ಮಾಹಿತಿ ಇದೆ. ನನ್ನ ತಾಯಿ ಆಸ್ಪತ್ರೆಗೆ ಬಂದಿರಲಿಲ್ಲ ಅವರು ಮನೆಯಲ್ಲಿಯೇ ಇದ್ದರು. ನಾನು ಗಲಾಟೆಯಲ್ಲಿ ಗಾಯಗಳು ಆಗಿದ್ದನ್ನು ನನ್ನ ತಾಯಿಗೆ ಖುದ್ದಾಗಿ ಹೇಳಿರಲಿಲ್ಲ ಎಂದರೆ ಹೇಳಿರುವುದಿಲ್ಲ ಏಕೆಂದರೆ ನನ್ನ ತಾಯಿ ಗಲಾಟೆಯನ್ನು ನೋಡಿದ್ದಾರೆ. ಆಸ್ಪತ್ರೆಗೆ ನನ್ನನ್ನು ಭೇಟಿಯಾಗಲು ನನ್ನ ತಾಯಿ ಬಂದಿರಲಿಲ್ಲ ಏಕೆಂದರೆ ಅವರನ್ನು ಕರೆದುಕೊಂಡು ಬರಲು ಯಾರೂ ಇರಲಿಲ್ಲ.

21. ಚಾಸಾ-4 ನಾರಾಯಣಸ್ವಾಮಿ ಘಟನೆ ಸಮಯದಲ್ಲಿ ಬೆಂಗಳೂರಿನ ಡಾಲರ್ಸ್ ಕಾಲೋನಿಯಲ್ಲಿ ಮನೆ ಮಾಡಿಕೊಂಡು ವಾಸವಾಗಿದ್ದರು. ಚಾಸಾ-4 ನಾರಾಯಣಸ್ವಾಮಿ ಘಟನೆ ಆದ ನಂತರ ನಮ್ಮ ಊರಿಗೆ ಬಂದಿದ್ದರು ಎಂದರೆ ಸರಿಯಲ್ಲ ಘಟನೆಗೆ ಮುಂಚಿತವಾಗಿಯೇ ನಮ್ಮ ಊರಿನಲ್ಲಿ ಇದ್ದರು. ಚಾಸಾ-4 ನಾರಾಯಣಸ್ವಾಮಿ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗಲೂ ಆಸ್ಪತ್ರೆಯಲ್ಲಿದ್ದರು. ಕಾರಿನಲ್ಲಿ ದೇವನಹಳ್ಳಿಗೆ ನಮ್ಮ ಊರಿನಿಂದ ಹೋದರೆ 15-20 ನಿಮಿಷ ಬೇಕು.

22. ನಾವು ಆರು ಜನ ಗಾಯಗಳುಗಳು ಒಂದೇ ಕಾರಿನಲ್ಲಿ ದೇವನಹಳ್ಳಿ ಆಸ್ಪತ್ರೆಗೆ ಹೋಗಿದ್ದೆವು ಜೊತೆಗೆ ಚಾಸಾ-4 ನಾರಾಯಣಸ್ವಾಮಿ ಇದ್ದರು. ಆಸ್ಪತ್ರೆಗೆ ಹೋಗುವಾಗಲೂ ನನಗೆ ಗಾಯಗಳಾಗಿ ರಕ್ತ ಸೋರುತ್ತಿತ್ತು ಎಂದರೆ ಸರಿ. ಕಾರ್ ರಕ್ತವಾಗಿತ್ತು, ನನ್ನ ಕೈಗಳು ರಕ್ತವಾಗಿದ್ದವು. ಆಸ್ಪತ್ರೆಯಿಂದ ಮರುದಿನ ಸ್ಮಶಾನಕ್ಕೆ ಟೆಂಪೋದಲ್ಲಿ ಹೋಗುವಾಗ ಮೂವರು ಮೃತರು, ನಾವು ಮೂವರು ಗಾಯಾಳುಗಳು ಸೇರಿ 8-10 ಜನ ಹೋಗಿದ್ದೆವು. ಸದರಿ ಟೆಂಪೋವನ್ನು ಆಸ್ಪತ್ರೆಗೆ ನೆಂಟರು ಕರೆಸಿದ್ದರು ಅದರ ವಾಹನ ಸಂಖ್ಯೆ ಗೊತ್ತಿಲ್ಲ. ನಾವು ಆಸ್ಪತ್ರೆಯಿಂದ ಅಂತ್ಯಕ್ರಿಯೆಗಾಗಿ ಅಂಬುಲೆನ್ಸ್‌ನಲ್ಲಿ ಹೋಗಿದ್ದೆವು ಎಂದರೆ ಸರಿಯಲ್ಲ. ಆಸ್ಪತ್ರೆಗೆ ನಾವು ದಾಖಲಾದಾಗ ಮೊದಲು ವೈದ್ಯರು ಯಾರನ್ನು ಪರೀಕ್ಷೆಗೆ ಒಳಪಡಿಸಿದ್ದರು ಎಂದು ಈಗ ನನಗೆ ನೆನಪಿಲ್ಲ.

23. ನಾನು ಡಿವೈಎಸ್‌ಪಿ ಕಛೇರಿಯಲ್ಲಿ ಹೇಳಿಕೆ ನೀಡಬೇಕೆಂದು ದೊಡ್ಡಬಳ್ಳಾಪುರ ಡಿವೈಎಸ್‌ಪಿ ಕಛೇರಿಯ ಮುಖ್ಯಪೇದೆ ಬಂದು ಕರೆದುಕೊಂಡು ಹೋಗಿದ್ದರು. ಡಿವೈಎಸ್‌ಪಿ ಕಛೇರಿಗೆ ಹೋಗುವಾಗ ಬೆಳಗ್ಗೆ 10.00ರಿಂದ 11.00 ಗಂಟೆ ಆಗಿತ್ತು ಸದರಿ ಮುಖ್ಯ ಪೇದೆಯವರ ಹೆಸರು ಹೇಳಲು ಆಗುವುದಿಲ್ಲ. ನನಗೆ ಹೇಳಿಕೆ ನೀಡಲು ನೋಟಿಸ್ ನೀಡಿರಲಿಲ್ಲ.

PW.2

ನಾನು ಡಿವೈಎಸ್‌ಪಿ ಕಛೇರಿಗೆ ಹೇಳಿಕೆ ನೀಡಲು ಏಕೆ ಬರಬೇಕು ಎಂದು ಮುಖ್ಯಪೇದೆಯನ್ನು ಕೇಳಿರಲಿಲ್ಲ ಘಟನೆ ನಡೆದಿದ್ದರಿಂದ ಕೇಳಿರಲಿಲ್ಲ. ಮುಖ್ಯ ಪೇದೆ ದ್ವಿಚಕ್ರ ವಾಹನದಲ್ಲಿ ಬಂದಿದ್ದರು. ಮುಖ್ಯ ಪೇದೆ ನನಗೆ ಘಟನೆಯ ಬಗ್ಗೆ ಏನೂ ಕೇಳಿರಲಿಲ್ಲ. ಡಿವೈಎಸ್‌ಪಿ ಕಛೇರಿಯಲ್ಲಿ ನಾನು ಹೇಳಿಕೆ ನೀಡಿದ್ದು ಪೋಲಿಸರು ಬರೆದುಕೊಂಡಿದ್ದಾರೆ. ಡಿವೈಎಸ್‌ಪಿ ಕಛೇರಿಯಲ್ಲಿ ಸುಮಾರು 2ರಿಂದ 3 ಘಂಟೆಗಳ ಕಾಲ ಇದ್ದೆನು. ಘಟನೆ ಆದ ಸ್ಥಳವನ್ನು ತೋರಿಸುವಂತೆ ಕೇಳಿರಲಿಲ್ಲ ಘಟನೆಯಾದ ಸ್ಥಳದ ಬಗ್ಗೆ ನಾನು ಹೇಳಿಕೆ ನೀಡಿದ್ದೇನೆ. ಘಟನಾ ಸ್ಥಳವನ್ನು ತೋರಿಸುವಂತೆ ಪೋಲಿಸರು ಕೇಳಿದ್ದರೆ ನಾನು ಹೇಳುತ್ತಿದ್ದೆ. ಡಿವೈಎಸ್‌ಪಿ ಕಛೇರಿಯಲ್ಲಿ ನಾನು ಹೇಳಿಕೆ ನೀಡಲು ಹೋಗುವಾಗ ರಕ್ತವಾದ ಬಟ್ಟೆಗಳನ್ನು ತೆಗೆದುಕೊಂಡು ಬರುವಂತೆ ಕೇಳಿರಲಿಲ್ಲ ನಾನು ತೆಗೆದುಕೊಂಡು ಹೋಗಿರಲಿಲ್ಲ.

24. ನಾನು ಡಿವೈಎಸ್‌ಪಿ ಕಛೇರಿಗೆ ಮೂರು ಬಾರಿ ಹೋಗಿ ಬಂದಿದ್ದೇನೆ. ಹೇಳಿಕೆ ನೀಡಿದ ಸುಮಾರು 8-9 ದಿನಗಳ ನಂತರ ನಾನು ಪುನಃ ಡಿವೈಎಸ್‌ಪಿ ಕಛೇರಿಗೆ ಹೋಗಿದ್ದೆನು. ಹೇಳಿಕೆ ನೀಡಲು ಹೋದಾಗ ರಕ್ತವಾಗಿದ್ದ ಬಟ್ಟೆಗಳನ್ನು ಮರುದಿನ ಹಾಜರುಪಡಿಸುವಂತೆ ಪೋಲಿಸರು ನನಗೆ ಹೇಳಿರಲಿಲ್ಲ. ಪೋಲಿಸರು ನನ್ನ ರಕ್ತವಾಗಿದ್ದ ಬಟ್ಟೆಗಳನ್ನು ತೆಗೆದುಕೊಂಡು ಬರಲು ಹೇಳಿರಲಿಲ್ಲ ಎಂದರೆ ಸರಿಯಲ್ಲ ಘಟನೆಯಾದ 20 ದಿನಗಳ ನಂತರ ಹೇಳಿದ್ದರು. ಮೊದಲನೇ ಸಾರಿ ಡಿವೈಎಸ್‌ಪಿ ಕಛೇರಿಗೆ ಹೋದಾಗ ರಕ್ತವಾಗಿದ್ದ ಬಟ್ಟೆಗಳನ್ನು ಹಾಜರುಪಡಿಸುವಂತೆ ಹೇಳಿರಲಿಲ್ಲ. 2ನೇ ಬಾರಿ ಡಿವೈಎಸ್‌ಪಿ ಕಛೇರಿಗೆ ಹೋದಾಗ ರಕ್ತವಾಗಿದ್ದ ಬಟ್ಟೆಗಳನ್ನು ಕೊಡಬೇಕು ಎನ್ನುವುದು ನನಗೆ ಗೊತ್ತಿತ್ತು. 2ನೇ ಸಾರಿ ಹೋದಾಗ ಬಟ್ಟೆಗಳನ್ನು ಹಾಜರುಪಡಿಸುವ ಆತುರತೆ ಇತ್ತು ಆದರೆ ಪೋಲಿಸರು ನಾವು ಕೇಳಿದಾಗ ತಂದುಕೊಡಿ ಎಂದು ಹೇಳಿದ್ದರು. 2ನೇ ಬಾರಿ ಡಿವೈಎಸ್‌ಪಿ ಕಛೇರಿಗೆ ಹೋದಾಗ ನನ್ನ ಹೇಳಿಕೆ ಪಡೆದಿದ್ದಾರೆ.

25. 2ನೇ ಬಾರಿ ಹೋಗಿ ಹೇಳಿಕೆ ನೀಡುವಾಗ ಪೋಲಿಸರ ವಶದಲ್ಲಿರುವ ನಮ್ಮೂರಿನ ಶಾಂತಕುಮಾರ್, ಅವರ ತಮ್ಮಂದಿರಾದ ವೆಂಟಕಪ್ಪ, ನಾರಾಯಣಸ್ವಾಮಿ, ಮುನಿಯಪ್ಪರವರ ಮಗ ನಾರಾಯಣಸ್ವಾಮಿ ಮತ್ತು ಮುನಿರಾಜುರವರುಗಳನ್ನು ಗಲಾಟೆ ದಿನ ನಾನು ನೋಡಲಿಲ್ಲ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ನಾನು, ಶಾಂತಕುಮಾರ್, ಅವರ ತಮ್ಮಂದಿರಾದ ವೆಂಟಕಪ್ಪ, ನಾರಾಯಣಸ್ವಾಮಿ, ಮುನಿಯಪ್ಪರವರ ಮಗ ನಾರಾಯಣಸ್ವಾಮಿ ಮತ್ತು ಮುನಿರಾಜುರವರು ಒಂದೇ ಜಾತಿಯವರು ಎಂದರೆ ಸರಿ.

26. ನಾನು ಜಮೀನಿನಲ್ಲಿದ್ದಾಗ ಗಲಾಟೆ ಆಗಿದೆ ಎಂದು ಯಾರೂ ಸಹ ವಿಚಾರ ತಿಳಿಸಿರಲಿಲ್ಲ ಏಕೆಂದರೆ ಗಲಾಟೆ ಶಬ್ದ ಕೇಳಿಸಿತ್ತು, ನನ್ನನ್ನು ಪೋಲಿಸರು ವಿಚಾರಿಸಿದಾಗ ಕೂಡಲೇ ನಾನು ಏನು ಅಂತ ನೋಡಲು ಮನೆಯ ಹತ್ತಿರ ಓಡಿ ಬರುವಾಗ ಕೆಲವರು ಓಡಿ ಹೋದರು ಇನ್ನೂ ಕೆಲವರು ಬೈಕುಗಳಲ್ಲಿ ಹೋದರು ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿ. ನನ್ನನ್ನು ಪೋಲಿಸರು ವಿಚಾರಿಸಿದಾಗ, ಆಗ ನಾನು ಅಲ್ಲೇ ಇದ್ದ ಕಲ್ಲನ್ನು ಎತ್ತಿ ಅವರ ಮೇಲೆ ಎಸೆದೆ ಆ ಕಲ್ಲು ಅವರ ಪೈಕಿ ವಯಸ್ಸಾದ ವ್ಯಕ್ತಿಯ ಕಾಲಿಗೆ ಬಿತ್ತು ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿ.

27. ಚಾಸಾ-4 ನಾರಾಯಣಸ್ವಾಮಿ ಹಾಗೂ 6ನೇ ಆರೋಪಿಯು ಯಾವುದೇ ಪಂಚಾಯ್ತಿ ಚುನಾವಣೆಯಲ್ಲಿ ಭಾಗವಹಿಸಿರುವುದಿಲ್ಲ ಎಂದರೆ ಸರಿ. ನನ್ನನ್ನು ಪೋಲಿಸರು ವಿಚಾರಿಸಿದಾಗ ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ, ಈ ಘಟನೆಗೆ ನಮ್ಮ ಊರಿನ 6ನೇ ಶಾಂತಕುಮಾರ ಮತ್ತು ನನ್ನ ಅಣ್ಣ ಚಾಸಾ-4 ನಾರಾಯಣ ಸ್ವಾಮಿರವರ ಮಧ್ಯೆ ಇದ್ದ ರಾಜಕೀಯ ವೈಷಮ್ಯವೇ ಕಾರಣ, 6ನೇ ಆರೋಪಿ, 1ನೇ ಆರೋಪಿ ಮತ್ತು ಇತರರನ್ನು ಕರೆದುಕೊಂಡು ಬಂದು ನಮ್ಮ

PW.2

ಮೇಲೆ ಗಲಾಟೆ ಮಾಡಿಸಿದ್ದರು, ಈ ಘಟನೆಗೆ 6ನೇ ಆರೋಪಿಯೇ ಕಾರಣ ಎಂದು ಹೇಳಿಕೆ ನೀಡಿರಲಿಲ್ಲ ಎಂದರೆ ಸರಿಯಲ್ಲ.

28. 1 ಮತ್ತು 6ನೇ ಆರೋಪಿಗಳು ಬೇರೆ ಬೇರೆ ಜಾತಿಯವರು ಎಂದರೆ ಸರಿ. 1ನೇ ಆರೋಪಿ ಹಾಗೂ 6ನೇಯ ಆರೋಪಿಯ ಊರು ಸುಮಾರು ಎರಡು ಕಿಮೀ ಅಂತರ ಇದೆ. ನನಗೂ ಹಾಗೂ 1ನೇ ಆರೋಪಿಯ ಮಧ್ಯೆ ಯಾವುದೇ ವ್ಯವಹಾರ ಇರುವುದಿಲ್ಲ. 1 ಮತ್ತು 6ನೇ ಆರೋಪಿತರ ಮಧ್ಯೆ ಯಾವ ವ್ಯವಹಾರ ಇದೆ ಗೊತ್ತಿಲ್ಲ. ಈ ಘಟನೆಗೆ 6ನೇ ಶಾಂತಕುಮಾರ ಮತ್ತು ನನ್ನ ಅಣ್ಣ ಚಾಸಾ-4 ನಾರಾಯಣ ಸ್ವಾಮಿರವರ ಮಧ್ಯೆ ಇದ್ದ ರಾಜಕೀಯ ವೈಷಮ್ಯವೇ ಕಾರಣ ಎಂದು ಚಾಸಾ-4ರವರು ಹೇಳಿಕೊಟ್ಟಂತೆ ಸುಳ್ಳು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

29. ನಾನು ಘಟನೆ ಆದ ನಂತರ ಸ್ಥಳಕ್ಕೆ ಹೋಗಿದ್ದೆನು ನಾನು ಹೋಗುವಷ್ಟರಲ್ಲಿ ಘಟನೆ ಮುಗಿದಿತ್ತು ಎಂದರೆ ಸರಿಯಲ್ಲ. ನನಗೆ ಘಟನೆಯಲ್ಲಿ ಯಾವುದೇ ಗಾಯಗಳು ಆಗಿರಲಿಲ್ಲ ಎಂದರೆ ಸರಿಯಲ್ಲ, ನಾನು ಸರ್ಕಾರಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಾಗಿರಲಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 4, 15ರಿಂದ 19ನೇ ಆರೋಪಿಗಳ ಪರ ಶ್ರೀ ಟಿ ಎಸ್ ವಕೀಲರಿಂದಃ**

30. 4 ಮತ್ತು 17ನೇ ಆರೋಪಿಗಳು ಅಣ್ಣತಮ್ಮಂದಿರು ಸರಿ. ಅವರ ತಂದೆಯ ಹೆಸರು ಗುರುಮೂರ್ತಿ ಎಂದರೆ ಸರಿ. 5ನೇ ಆರೋಪಿಯ ತಂದೆ ಯ ಹೆಸರು ಸಂಪಂಗಿ ಎಂದರೆ ಸರಿ. ಗುರುಮೂರ್ತಿ ಹಾಗೂ ಸಂಪಂಗಿ ಅಣ್ಣತಮ್ಮಂದಿರು ಎಂದರೆ ಸರಿ. 15 ಮತ್ತು 16ನೇ

PW.2

ಆರೋಪಿಗಳು 6ನೇ ಆರೋಪಿಯ ತಮ್ಮಂದಿರು ಸರಿ. 4ರಿಂದ 6, 15ರಿಂದ 18ನೇ ಆರೋಪಿಗಳು ನಮ್ಮ ಊರಿನವರು ನಮ್ಮ ಜಾತಿಯವರು ಎಂದರೆ ಸರಿ.

31. ನಮ್ಮ ಮಧ್ಯೆ 4ರಿಂದ 6, 15ರಿಂದ 19ನೇ ಆರೋಪಿಗಳ ಮಧ್ಯೆ ಈ ಪ್ರಕರಣದ ಮುಂಚೆ ಯಾವುದೇ ಗಲಾಟೆಗಳು ಆಗಿರಲಿಲ್ಲ. ನಾವು ನಾಲ್ಕು ಜನ ಅಣ್ಣ ತಮ್ಮಂದಿರು. ಅದರಲ್ಲಿ ದೇವರಾಜು ಈ ಪ್ರಕರಣದಲ್ಲಿ ಮೃತರಾಗಿರುತ್ತಾರೆ ಇನ್ನೊಬ್ಬ ಸಹೋದರ ವೆಂಕಟಪ್ಪ ಖಾಯಿಲೆಯಿಂದ ಘಟನೆಯಾದ ನಾಲ್ಕು ವರ್ಷಗಳ ನಂತರ ಮೃತರಾಗಿರುತ್ತಾರೆ. ಘಟನೆಗೆ ಮುಂಚೆ ಚಾಸಾ-1ರವರೊಂದಿಗೆ ನಾವೆಲ್ಲಾ ಕೂಡಿ ಇರಲಿಲ್ಲ ನಾನು ಮತ್ತು ಮೃತ ದೇವರಾಜು ಒಟ್ಟಿಗೆ ಇದ್ದೆವು. ಚಾಸಾ-1 ಹಾಗೂ ಮೃತ ವೆಂಕಟಪ್ಪ ಬೇರೆ ಬೇರೆ ವಾಸವಾಗಿದ್ದರು. ನಾನು ಘಟನೆಯ ಸಮಯದಲ್ಲಿ ಕೆಲಸ ಮಾಡುತ್ತಿದ್ದ ಜಮೀನಿನ ಸರ್ವೆ ನಂಬರ್ 4-1 ದ್ಯಾವರಹಳ್ಳಿಯಲ್ಲಿದೆ. ಸದರಿ ಜಮೀನು ನನ್ನ ತಂದೆ ಹೆಸರಿನಲ್ಲಿತ್ತು, ಸರ್ವೆ ನಂಬರ್ 110-2 ತಿಂಡ್ಲು ಗ್ರಾಮದಲ್ಲಿದ್ದು ಅದು ಚಾಸಾ-4ರವರ ತಂದೆಯ ಹೆಸರಿನಲ್ಲಿತ್ತು, ನಾನು, ಚಾಸಾ-1 ಹಾಗೂ ನನ್ನ ತಾಯಿ ಸೇರಿ ಸರ್ವೆ ನಂಬರ್ 110-2ರಲ್ಲಿ ಭಾಗ ಬೇಕು ಎಂದು ಚಾಸಾ-4ರವರ ತಾಯಿಯ ವಿರುದ್ದ ದಾವೆ ಸಲ್ಲಿಸಿದ್ದೆವು ಎಂದರೆ ಸರಿ. ಸದರಿ ಜಮೀನು ಚಾಸಾ-4ರವರ ತಂದೆ ತೀರಿದ ನಂತರ ಅವರ ತಾಯಿಯ ಹೆಸರಿಗೆ ವರ್ಗಾವಣೆಯಾಗಿತ್ತು ಎಂದರೆ ಸರಿ. ಅವರ ತಾಯಿ ತೀರಿದ ನಂತರ ಚಾಸಾ-4 ಮತ್ತು ಮುನಿರಾಜುರವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇವೆ ಎಂದರೆ ಸರಿ. ಸದರಿ ಪ್ರಕರಣ ಈಗಲೂ ಚಾಲ್ತಿಯಲ್ಲಿದೆ ಎಂದರೆ ಸರಿ.

32. ಸರ್ವೆ ನಂಬರ್ 4-1 ಹಾಗೂ 110-2 ಅಕ್ಕಪಕ್ಕದಲ್ಲಿವೆ ಆದರೆ ಗ್ರಾಮಗಳು ಬೇರೆ ಬೇರೆ. ಸರ್ವೆ ನಂಬರ್ 110-2ರಲ್ಲಿ ನಾವು ಹಾಗೂ ಚಾಸಾ-4ರವರು ಸ್ವಾಧಿನಾನುಭವದಲ್ಲಿದ್ದೆವು. ಘಟನೆಯ ದಿನ ಬೆಳಗ್ಗೆ 06.30 ಗಂಟೆಗೆ ಜಮೀನಿಗೆ ಹೋಗಿದ್ದೆನು. ಚಾಸಾ-1 ನನ್ನೊಂದಿಗೆ

PW.2

ಜಮೀನಿಗೆ ಬಂದಿರಲಿಲ್ಲ ಸಾಮಾನ್ಯವಾಗಿ 07.00ರಿಂದ 07.30ರ ಸಮಯದಲ್ಲಿ ಜಮೀನಿಗೆ ಬರುತ್ತಿದ್ದರು. ಸರ್ವೆ ನಂಬರ್ 110-2 ಚಾಸಾ-2 ಮತ್ತು 4ರವರು ಜಮೀನಿಗೆ ಬರುತ್ತಿರಲಿಲ್ಲ ಅವರಿಗೆ ನೀಲಗಿರಿ ತೋಪು ಇತ್ತು ಆದ್ದರಿಂದ ಬರುತ್ತಿರಲಿಲ್ಲ. ಅವರ ವ್ಯವಸಾಯದ ಜಮೀನು ಅವರು ವಾಸವಿದ್ದ ಮನೆಯ ನೂರು ಅಡಿ ಅಂತರದಲ್ಲಿ ಇದೆ. ಚಾಸಾ-1 ಸದರಿ ದಿನ ಬೆಳಗ್ಗೆ 07.00 ಗಂಟೆಗೆ ಜಮೀನಿನ ಹತ್ತಿರ ಬಂದು 07.30ರ ಸಮಯಕ್ಕೆ ಪುನಃ ವಾಪಸ್ಸು ಹೋಗಿದ್ದರು. ಘಟನೆಯ ದಿನ ನಾನು ಹಾಗೂ ಚಾಸಾ-1 ಗಲಾಟೆ ಮುಗಿಯುವರೆಗೂ ಜಮೀನಿನಲ್ಲಿದ್ದೆವು ಎಂದರೆ ಸರಿಯಲ್ಲ. ಗಲಾಟೆ ಮುಗಿದ ನಂತರ ನಾನು ಹಾಗೂ ಚಾಸಾ-1 ಜಮೀನಿನಿಂದ ಸ್ಥಳಕ್ಕೆ ಬಂದಿದ್ದೆವು ಅಷ್ಟರಲ್ಲಿ ಮೂರು ಜನರಿಗೆ ಗಾಯಗಳಾಗಿ ಕೆಳಗೆ ಬಿದ್ದಿದ್ದರು ಎಂದರೆ ಸರಿಯಲ್ಲ. ಪ್ರಾಸಾ-2ರವರು ತಮ್ಮ ಜಮೀನಿನ ಬಳಿ ಇದ್ದರು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು ಹಾಗೂ ಚಾಸಾ-1 ಘಟನೆಯ ಸ್ಥಳಕ್ಕೆ ಹೋದ ನಂತರ ಪ್ರಾಸಾ-2ರವರು ಸ್ಥಳಕ್ಕೆ ಬಂದಿದ್ದರು ಎಂದರೆ ಸರಿಯಲ್ಲ.

33. ಘಟನೆ ಸಮಯದಲ್ಲಿ ಚಾಸಾ-4ರವರು ಎಲ್‌ಎಲ್‌ಬಿ ಪದವಿ ಓದುತ್ತಿದ್ದರು ಹಾಗೂ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರು. ಚಾಸಾ-4ರವರು ಬೆಂಗಳೂರಿನಲ್ಲಿ ಘಟನೆಯ ಎರಡು ವರ್ಷಕ್ಕಿಂತ ಮುಂಚೆ ವಾಸವಾಗಿದ್ದರು ಗಲಾಟೆಯ ದಿನ ಊರಿಗೆ ಬಂದಿದ್ದರು. ಚಾಸಾ-4ರವರ ವಿಳಾಸ ಗೊತ್ತಿಲ್ಲ. ಚಾಸಾ-4ರವರು ಹಬ್ಬದ ದಿನ ಹಾಗೂ ಯಾವುದಾದರೂ ಕೆಲಸಗಳು ಇದ್ದರೆ ನಮ್ಮ ಊರಿಗೆ ಬಂದು ಹೋಗುತ್ತಿದ್ದರು. ಚಾಸಾ-4ರವರು ಗಲಾಟೆಯಾದ ನಂತರ ಬೆಂಗಳೂರಿನಿಂದ ನಮ್ಮ ಊರಿಗೆ ಬಂದಿದ್ದರು ಎಂದರೆ ಸರಿಯಲ್ಲ. ಚಾಸಾ-4ರವರು ಊರಿಗೆ ಕಾರಿನಲ್ಲಿ ಬಂದಿದ್ದರು ಅದರ ನಂಬರ್ ಗೊತ್ತಿಲ್ಲ ಮಹೀಂದ್ರಾ ಕಂಪನಿಯದ್ದಿರಬಹುದು. ಸದರಿ ವಾಹನ ಘಟನೆಗಿಂತ ಎರಡು ವರ್ಷಗಳ ಮುಂಚೆಯಿಂದಲೇ ಚಾಸಾ-4ರವರ ಬಳಿ ಇತ್ತು. ಈ

PW.2

ಪ್ರಕರಣದಲ್ಲಿ ಸಾಕ್ಷಿ ಎಂದು ಪರಿಗಣಿಸಬೇಕೆಂದು ಚಾಸಾ-4ರವರಿಗೆ ಗಾಯ ಮಾಡಿದ್ದೆವು ಎಂದರೆ ಸರಿಯಲ್ಲ.

34. ನಾನು ಸ್ಥಳಕ್ಕೆ ಬಂದಾಗ ಬೈಕ್ ನಲ್ಲಿ ಕೆಲವರು ಹೋಗುತ್ತಿದ್ದರು. ಸುಮಾರು 3-4 ಬೈಕ್‌ಗಳು ಘಟನೆಯ ಸ್ಥಳದಲ್ಲಿದ್ದವು. ಬೈಕ್‌ಗಳು ಯಾವುವು ಎಂದು ಹೇಳಲು ಆಗುವುದಿಲ್ಲ ಒಂದೊಂದು ಬೈಕ್ ನಲ್ಲಿ ಮೂರು ಜನರು ಇದ್ದರು. ಓಡಿ ಹೋಗುತ್ತಿದ್ದ ಜನರಲ್ಲಿ ನಮ್ಮೂರಿನವರು ಇರುವುದಿಲ್ಲ ಪರಿಚಯಇರಲಿಲ್ಲ ಎಂದರೆ ಸರಿಯಲ್ಲ ಮೂರು ಜನ ನಮ್ಮೂರಿನವರು ಬೇರೆ ಊರಿನ ಜನರು ಇದ್ದರು. 3-4 ಜನ ಓಡಿ ಹೋಗುತ್ತಿದ್ದರು. ಬೈಕ್‌ಗಳಲ್ಲಿ ಹಾಗೂ ಓಡಿ ಹೋಗುತ್ತಿದ್ದ ಜನರಲ್ಲಿ 5 ಜನ ನಮ್ಮೂರಿನವರು 13 ಜನ ಬೇರೆ ಊರಿನವರು ಇರಬಹುದು. ಸದರಿ ಬೇರೆ ಊರಿನವರಾದ 13 ಜನರನ್ನು ನಾನು ಘಟನೆಗೆ ಮುಂಚೆ ನೋಡಿರಲಿಲ್ಲ.

35. 4ನೇ ಆರೋಪಿ ನಮ್ಮ ಮನೆಯ ಪಕ್ಕದಲ್ಲಿ ಅಂಗಡಿ ಇಟ್ಟುಕೊಂಡಿದ್ದಾರೆ ಎಂದರೆ ಸರಿ. ಅಂಗಡಿಯನ್ನು 6.30ರಿಂದ 07.00 ಗಂಟೆ ಸಮಯದಲ್ಲಿ ತೆರೆಯುತ್ತಾರೆ. ಘಟನೆಯ ಸಮಯದಲ್ಲಿ 4ನೇ ಆರೋಪಿಯ ಅಂಗಡಿ ತೆರೆದಿತ್ತು ಅಂಗಡಿಯಲ್ಲಿ 4ನೇ ಆರೋಪಿ ವ್ಯಾಪಾರ ಮಾಡುತ್ತಿದ್ದನು ಎಂದರೆ ನಾನು ನೋಡಿರುವುದಿಲ್ಲ. ಆತನ ಅಂಗಡಿಯಲ್ಲಿ ಬೇರೆ ಯಾರು ಕೆಲಸಕ್ಕೆ ಇದ್ದರು ಗೊತ್ತಿಲ್ಲ. 4ನೇ ಆರೋಪಿಯ ಅಂಗಡಿ ಚಿಲ್ಲರೆ ಅಂಗಡಿ ಆತನ ಅಂಗಡಿಯಲ್ಲಿ ನಾವು ಸಾಮಾನುಗಳನ್ನು ತೆಗೆದುಕೊಳ್ಳುತಿದ್ದೆವು ಎಂದರೆ ಸರಿಯಲ್ಲ. ಘಟನೆಯ ಮುಂಚೆ ನನಗೂ ಹಾಗೂ 4ನೇ ಆರೋಪಿಯ ಮಧ್ಯೆ ಯಾವುದೇ ತಂಟೆ ತಕರಾರುಗಳು ಆಗಿರಲಿಲ್ಲ. 4ನೇ ಆರೋಪಿ ನನಗೆ ಚಾಕುವಿನಿಂದ ಸೊಂಟಕ್ಕೆ ಹಲ್ಲೆ ಮಾಡಿದ್ದನು ಎಂದುಚಾಸಾ-4ರವರ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

PW.2

36. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ 4ನೇ ಆರೋಪಿಯು ಹಲ್ಲೆ ಮಾಡಿದ್ದಾನೆ ಎಂದು ವೈದ್ಯರಿಗೆ ಹೇಳಿದ್ದೇನೆ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವ ಸಮಯದಲ್ಲಿ 4ನೇ ಆರೋಪಿ ಹಲ್ಲೆ ಮಾಡಿದ್ದಾನೆ ಎಂದು ಪೋಲಿಸರಿಗೆ ಹೇಳಿದ್ದೇನೆ. ಘಟನೆಯಾದ ಎರಡು ದಿನಗಳ ನಂತರ ಚಾಸಾ-4ರವರು ನನ್ನನ್ನು ಕರೆದುಕೊಂಡು ಹೋಗಿ 4ನೇ ಆರೋಪಿಯ ಹೆಸರನ್ನು ಹೇಳಬೇಕೆಂದು ಹೇಳಿಕೊಟ್ಟಿದ್ದರು ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 1 ಮತ್ತು 12ನೇ ಆರೋಪಿಗಳ ಪರ ಶ್ರೀ ಎಂಆರ್‌ಎನ್ ವಕೀಲರಿಂದಃ**

37. ದಿಃ10.02.2010ರಿಂದ 16.02.2010ರವರೆಗೆ 1 ಹಾಗೂ 12ನೇ ಆರೋಪಿಗಳು ಎಲ್ಲಿ ಇದ್ದರು ಏನು ಮಾಡುತ್ತಿದ್ದರು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ ಗಲಾಟೆಯಲ್ಲಿ ನೋಡಿದ್ದೇನೆ. ಪೋಲಿಸರು ಹಾಗೂ ಚಾಸಾ-4ರವರ ಮಾತುಗಳನ್ನು ಕೇಳಿ ಘಟನೆಯ ಸಮಯದಲ್ಲಿ ಇರಲಿಲ್ಲ ಗಾಯಗಳು ಆಗಿರಲಿಲ್ಲ ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

38. ಚಾಸಾ-4ರವರು ರಾಜಕಾರಣ ಹಾಗೂ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದರು ಎಂದರೆ ಸರಿ. ಚಾಸಾ-4 ರಾಜಕಾರಣ ಹಾಗೂ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದುದರಿಂದ ಅವರ ಮನೆಗೆ ಸಾಕಷ್ಟು ಜನರು ಬಂದು ಹೋಗುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರ ವೈಯಕ್ತಿಕ ವ್ಯವಹಾರಗಳು ನನಗೆ ಗೊತ್ತಿಲ್ಲ. ಚಾಸಾ-4ರವರ ವಿರುದ್ದ ಎಷ್ಟು ಜನರು ಶತ್ರುಗಳು ಇದ್ದಾರೆ ಮಚ್ಚು ಮಸೆಯುತ್ತಿದ್ದಾರೆ ನನಗೆ ಗೊತ್ತಿಲ್ಲ ಎಂದರೆ ಸರಿ.

**ಪಾಟೀ ಸವಾಲುಃ 17ನೇ ಆರೋಪಿ ಪರ ಶ್ರೀ ಕೆವಿಕೆ ವಕೀಲರಿಂದಃ**

PW.2

39. 4, 15ರಿಂದ 19ನೇ ಆರೋಪಿಗಳ ಪರವಾಗಿ ಮಾಡಿದ ಪಾಟೀ ಸವಾಲನ್ನೆ ಅಳವಡಿಸಿಕೊಳ್ಳುವುದಾಗಿ ಹೇಳುತ್ತಾರೆ.

**ಪಾಟೀ ಸವಾಲುಃ 3, 7, 11, 13 ಮತ್ತು 14ನೇ ಆರೋಪಿಗಳ ಪರ**
**ಶ್ರೀ ಕೆಜೆಜೆ ವಕೀಲರಿಂದಃ**

40. ಆರೋಪಿ ಪರ ವಕೀಲರು ಹಾಜರಿದ್ದು ತಮ್ಮ ಹಿರಿಯ ವಕೀಲರು ಮಧ್ಯಾಹ್ನ ಅವಧಿಯಲ್ಲಿ ಪಾಟೀ ಸವಾಲು ಮಾಡುವುದಾಗಿ ಕಾಲಾವಕೋಶ ಕೋರಿದ್ದು ವಿನಂತಿಯ ಮೇರೆಗೆ ಮಧ್ಯಾಹ್ನದ ಅವಧಿಗೆ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ ಎಂದು ನುಡಿದಿದ್ದಾರೆ.

(ಮೋಹನ ಬಾಡಗಂಡಿ)
2ನೇ ಅಪರ ಜಿಲ್ಲಾ ಮತ್ತು ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.

ದಿ.17.03.2022 ರಂದು ಮಧ್ಯಾಹ್ನದ ಅವಧಿಯಲ್ಲಿ ಸಾಕ್ಷಿಯನ್ನು ಮತ್ತೆ ಕರೆಸಿ ಪ್ರಮಾಣವಚನ ಬೋದಿಸಲಾಯ್ತು.

**ಪಾಟೀ ಸವಾಲುಃ 3, 7, 11, 13 ಮತ್ತು 14ನೇ ಆರೋಪಿಗಳ ಪರ**
**ಶ್ರೀ ಕೆಜೆಜೆ ವಕೀಲರಿಂದಃ**

41. ದ್ಯಾವರಹಳ್ಳಿಯಲ್ಲಿ ನನಗೆ ಮನೆ ಇದೆ. ಮನೆಯಿಂದ ಜಮೀನು ಒಂದು ಫರ್ಲಾಂಟ್ ದೂರ ಇದೆ. 3ನೇ ಆರೋಪಿಯನ್ನು ಈ ಘಟನೆಯ ಮುಂಚೆ ನೋಡಿರಲಿಲ್ಲ ಎಂದರೆ ಸರಿಯಲ್ಲ ದೇವನಹಳ್ಳಿ ನ್ಯಾಯಾಲಯದಲ್ಲಿ ನೋಡಿದ್ದೆ. ಸದರಿ ನ್ಯಾಯಾಲಯದಲ್ಲಿ 3ನೇ

PW.2

ಆರೋಪಿಯನ್ನು 2-3 ಬಾರಿ ನೋಡಿದ್ದೇನೆ. ಪೋಲಿಸರ ಮುಂದೆ ಹೇಳಿಕೆ ನೀಡುವಾಗ 3ನೇ ಆರೋಪಿ ಮೋಟಾರ್ ಸೈಕಲಿನಲ್ಲಿ ಓಡಿ ಹೋದನು ಎಂದು ಹೇಳಿದ್ದೇನೆ. ಘಟನೆ ನಡೆದ ನಂತರ 2ನೇ ಬಾರಿ ಠಾಣೆಗೆ ಹೋದಾಗ 3ನೇ ಆರೋಪಿ ಬೈಕ್ ನಲ್ಲಿ ಓಡಿ ಹೋದ ಎಂದು ಹೇಳಿಕೆಯಲ್ಲಿ ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಯಾವ ಬೈಕಿನಲ್ಲಿ 3ನೇ ಆರೋಪಿ ಓಡಿ ಹೋದ ಎಂದು ಈಗ ನೆನಪಿಲ್ಲ. 3ನೇ ಆರೋಪಿ ಹೋದ ವಾಹನದಲ್ಲಿ 2ನೇ ಆರೋಪಿ ಹಾಗೂ 8ನೇ ಆರೋಪಿ ಸಹ ಹೋಗಿದ್ದರು. ಪೋಲಿಸರ ಮುಂದೆ ಹೇಳಿಕೆ ನೀಡುವಾಗ 3ನೇ ಆರೋಪಿಯೊಂದಿಗೆ 2ನೇ ಆರೋಪಿ ಹಾಗೂ 8ನೇ ಆರೋಪಿ ಸಹ ಬೈಕಿನಲ್ಲಿ ಹೋಗಿದ್ದರು ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಮುಂದೆ ಹೇಳಿಕೆಯಲ್ಲಿ 3ನೇ ಆರೋಪಿಯೊಂದಿಗೆ 2ನೇ ಆರೋಪಿ ಬೈಕಿನಲ್ಲಿ ಹೋಗಿದ್ದ ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮೋಟಾರ್ ಬೈಕ್ ಅನ್ನು ತಡೆದಾಗ ಬೈಕ್ ನಲ್ಲಿ ಇದ್ದವರು ಬಿದ್ದರು ಅದರಲ್ಲಿ 2ನೇ ಆರೋಪಿ ಇರಲಿಲ್ಲ ಎಂದರೆ ಸರಿಯಲ್ಲ. ಪೋಲಿಸರ ಮುಂದೆ ಹೇಳಿಕೆಯಲ್ಲಿ ಮೋಟಾರನ್ನು ತಳ್ಳಿದಾಗ 3ನೇ ಆರೋಪಿ ಕೆಳಗೆ ಬಿದ್ದನು ಎಂದು ಹೇಳಿರುವುದಿಲ್ಲ ಎಂದರೆ ಸರಿಯಲ್ಲ. ಘಟನೆ ನಡೆದ ದಿನ 3ನೇ ಆರೋಪಿ ಯಾವ ಬಣ್ಣದ ಬಟ್ಟೆ ಹಾಕಿಕೊಂಡಿದ್ದನು ಎಂದು ಹೇಳಿರುವುದಿಲ್ಲ ಎಂದರೆ ಸರಿ. ನಾನು ಘಟನೆ ನಡೆದ ಸ್ಥಳಕ್ಕೆ ಬಂದಾಗ ಎಲ್ಲಾ ಆರೋಪಿತರು ಸ್ಥಳದಲ್ಲಿ ಇರಲಿಲ್ಲ ಎಂದರೆ ಹೋಗುತ್ತಾ ಇದ್ದರು.

42. 3ನೇ ಆರೋಪಿ ಹೋಗುತ್ತಿದ್ದ ಮೋಟಾರ್ ಸೈಕಲ್ ನನ್ನ ಪಕ್ಕದಲ್ಲೆ ಇತ್ತು. ಸದರಿ ದಿನ ಬಂದಿದ್ದ ಮೋಟಾರ್ ಬೈಕ್‌ಗಳು ಯಾವ ಬಣ್ಣದ್ದು ಯಾವ ಕಂಪನಿಯದ್ದು ಎಂದು ಹೇಳಲು ಆಗುವುದಿಲ್ಲ ಘಟನೆ ನಡೆದು 12 ವರ್ಷ ಆಗಿರುವುದರಿಂದ ಈಗ ನೆನಪಿಲ್ಲ. ಉಳಿದ ಬೈಕ್‌ಗಳು ಯಾವ ಕಂಪನಿಯದ್ದು ಬಣ್ಣದ್ದು ಎಂದು ಹೇಳಲು ಆಗುವುದಿಲ್ಲ. ಆಸ್ಪತ್ರೆಯಲ್ಲಿ

PW.2

ದಾಖಲಾದಾಗ 3ನೇ ಆರೋಪಿಯು ಘಟನೆಯಲ್ಲಿ ಭಾಗಿಯಾಗಿದ್ದ ಎನ್ನುವ ವಿಷಯವನ್ನು ಪೋಲಿಸರಿಗೆ ಹೇಳಿರುವುದಿಲ್ಲ ಆಗ ನನ್ನನ್ನು ಪೋಲಿಸರು ಕೇಳಿರಲಿಲ್ಲ.

43. ಪೋಲಿಸರು 3ನೇ ಆರೋಪಿಯನ್ನು ದಸ್ತಗಿರಿ ಮಾಡಿ ಠಾಣೆಯಲ್ಲಿ ಇಟ್ಟಿದ್ದರು ಆತನನ್ನು ನೋಡಿ ಈ ಘಟನೆಯಲ್ಲಿ ಭಾಗಿಯಾಗಿದ್ದನು ಎಂದು ಪೋಲಿಸರು ಹೇಳಿದ್ದರಿಂದ ನಾನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಘಟನೆ ದಿನ 3ನೇ ಆರೋಪಿ ಬಂದಿರಲಿಲ್ಲ ಘಟನೆಯಲ್ಲಿ ಭಾಗಿಯಾಗಿರಲಿಲ್ಲ ಆತ ವಾಹನದಲ್ಲಿ ಹೋಗುತ್ತಿರಲಿಲ್ಲ ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ತಳ್ಳಿದ್ದ ಮೋಟಾರ್ ಸೈಕಲ್ ನಲ್ಲಿ 3ನೇ ಆರೋಪಿ ಇರಲಿಲ್ಲ ಎಂದರೆ ಸರಿಯಲ್ಲ.

44. ನಾನು ಠಾಣೆಗೆ ಭೇಟಿ ನೀಡುವ ಮುಂಚೆ ಚಾಸಾ-4ರವರನ್ನು ಭೇಟಿಯಾಗಿದ್ದೆನು ಎಂದರೆ ಸರಿಯಲ್ಲ. ಚಾಸಾ-4ರವರು ಹೇಳಿಕೊಟ್ಟಂತೆ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯಲ್ಲಿ 3ನೇ ಆರೋಪಿಯನ್ನು ನಾನು ನೋಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 2 ಮತ್ತು 10ನೇ ಆರೋಪಿಗಳ ಪರ**
**ಶ್ರೀ ಕೆಎನ್ಆರ್ ವಕೀಲರಿಂದಃ**

45. ನಮ್ಮ ಮನೆಯ ಬಳಿ ಜೋರಾಗಿ ಕೂಗಿದರೆ ತೋಟಕ್ಕೆ ಕೇಳಿಸುವುದಿಲ್ಲ ಎಂದರೆ ಸರಿಯಲ್ಲ. ತೋಟದಿಂದ ಮನೆಯ ಮಧ್ಯೆ ನಾಲ್ಕು ಮನೆಗಳು ಮಾತ್ರ ಇವೆ. ನಾನು ತಳ್ಳಿದ ಬೈಕ್ ನಲ್ಲಿ ಇದ್ದವರು ಕೆಳಗೆ ಬಿದ್ದರು ಸದರಿ ಬೈಕಿನ ನಂಬರ್ ಕಂಪನಿಯ ಹೆಸರು ಹೇಳಲು ಆಗುವುದಿಲ್ಲ, ಗಲಾಟೆ ಮಾಡಿ ಅಲ್ಲಿಂದ ಹೋಗುತ್ತಿದ್ದರು ಆಗ ನಾನು ಬಂದಿದ್ದೆನು ಎಂದರೆ ಸರಿ.

PW.2

46. ನನಗೆ ಹಲ್ಲೆ ಮಾಡಿದವರ ಚಹರೆಯ ಗುರುತನ್ನು ಚಾಸಾ-1ರವರಿಗೆ ಹೇಳಿದ್ದೆನು ಚಾಸಾ-4ರವರಿಗೆ ಹೇಳಿರಲಿಲ್ಲ. ಠಾಣೆಗೆ ಮೊದಲ ಬಾರಿ ಹೋದಾಗ ಡಿವೈಎಸ್‌ಪಿರವರನ್ನು ಭೇಟಿಯಾಗಿದ್ದೆನು. ಠಾಣೆಗೆ ಮೋಟಾರ್ ಬೈಕ್ ನಲ್ಲಿ ಹೋಗಿದ್ದೆನು. 2ನೇ ಬಾರಿಯೂ ಡಿವೈಎಸ್‌ಪಿರವರನ್ನು ಭೇಟಿಯಾಗಿದ್ದೆನು.

47. ಚಾಕು ಮತ್ತು ಚೂರಿ ಬೇರೆ ಬೇರೆ ಎಂದರೆ ಸರಿ. ಚೂರಿ ಎರಡು ಕಡೆ ಮೊಣಚಾಗಿರುತ್ತದೆ ಎಂದರೆ ಸರಿ ಚಾಕು ಮಡಚಲು ಬರುತ್ತದೆ ಎಂದರೆ ಸರಿ. ಎರಡನೇ ಬಾರಿ ಡಿವೈಎಸ್‌ಪಿರವರ ಕಛೇರಿಗೆ ಹೋದಾಗ, "2ನೇ ಆರೋಪಿಯು ಚೂರಿಯಿಂದ ನನ್ನ ತಲೆಗೆ ಹೊಡೆದಿದ್ದರಿಂದ" ಎಂದು ಹೇಳಿದ್ದೇನೆ ಎಂದರೆ ಸರಿ. 2ನೇ ಬಾರಿ ಹೇಳಿಕೆಯಲ್ಲಿ "ಒಬ್ಬ ಹುಡುಗ ನನ್ನ ತಲೆಯ ಮೇಲೆ ಹೊಡೆದ" ಎಂದು ಹೇಳಿದ್ದೇನೆ ಎಂದರೆ ನಾಗೇಶ್ ಗೌಡ ತಲೆಗೆ ಹೊಡೆದ ಎಂದು ಹೇಳಿದ್ದೇನೆ. ಸಾಕ್ಷಿ ಹೇಳಿಕೆಯ ಭಾಗವನ್ನು ಒಪ್ಪಿಕೊಳ್ಳದೇ ಇರುವುದರಿಂದ ಅದನ್ನು ನಿಡಿ-6 ಎಂದು ಗುರುತು ಮಾಡಲಾಯಿತು.

48. ಈ ಪ್ರಕರಣ ದಾಖಲಾಗುವ ಮುಂಚೆ ನಾನು, ಚಾಸಾ-1 ಮತ್ತು 4ರವರು ಠಾಣೆಗೆ ಆಗಾಗ ಹೋಗಿ ಬರುತ್ತಿದ್ದೆವು ನಾವು ದಂಧೆಕೋರರು ಎಂದರೆ ಸರಿಯಲ್ಲ, ಚಾಸಾ-1, ಚಾಸಾ-2 ಹಾಗೂ ನನ್ನ ಮೇಲೆ ಕ್ರೈಂ ನಂ.28-2009 ಎಂದು ಕಲಂ 147, 427 ಐಪಿಸಿ ಅಪರಾಧಗಳಿಗೆ ಪ್ರಕರಣ ದಾಖಲಾಗಿತ್ತು ಎಂದರೆ ಸರಿ. ದೇವನಹಳ್ಳಿ ತಹಶೀಲ್ದಾರ್‌ರವರು ಪ್ರಕರಣ ಸಂಖ್ಯೆ ಎಂಎಜಿಸಿಆರ್ ನಂ. 143-2009-2010ರಲ್ಲಿ ಚಾಸಾ-2, 4 ಮತ್ತು ನನ್ನ ಮೇಲೆ ಕಲಂ 107 ಸಿಆರ್‌ಪಿಸಿ ಅಡಿಯಲ್ಲಿ ಪ್ರಕರಣ ದಾಖಲಿಸಿದ್ದರು ಎಂದರೆ ಸರಿ ಈ ಪ್ರಕರಣ ಕುರಿತಂತೆ ಮುಂಜಾಗ್ರತೆ ಕುರಿತಾಗಿ ದಾಖಲಿಸಿದ್ದಾರೆ. ನಾವು ಸ್ಥಳೀಯವಾಗಿ ಎಲ್ಲರನ್ನೂ ಹೆದರಿಸಿಕೊಂಡು

PW.2

ಜೀವನ ಮಾಡುತ್ತಿದ್ದೇವೆ ಎಂದರೆ ಸರಿಯಲ್ಲ ನಮ್ಮ ಮೇಲೆ ಇನ್ನೂ ಹಲವಾರು ಪ್ರಕರಣಗಳು ಇವೆ ಎಂದರೆ ಸರಿಯಲ್ಲ.

49. ಘಟನೆಯ ದಿನ 2ನೇ ಆರೋಪಿಯನ್ನು ನಾನು ನೋಡಿರಲಿಲ್ಲ ಠಾಣೆಯಲ್ಲಿ ಸಹ ಆತನನ್ನು ಗುರುತಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಘಟನೆಯ ಸಮಯದಲ್ಲಿ ಜಮೀನಿನಲ್ಲಿದ್ದೆನು, ಘಟನೆಯ ಗಲಾಟೆಯ ಶಬ್ದ ನನಗೆ ಕೇಳಿಸಿರಲಿಲ್ಲ, ಘಟನೆಯ ನಂತರ ನಾನು ಸ್ಥಳಕ್ಕೆ ಹೋಗಿದ್ದೆನು, ಚಾಸಾ-2 ಮತ್ತು 4ರವರ ಮಾತು ಕೇಳಿ 2 ಮತ್ತು 10ನೇ ಆರೋಪಿತರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯಲ್ಲಿ ಯಾವುದೇ ಚಾಕು ಚೂರಿಯನ್ನು ಉಪಯೋಗಿಸಿಲ್ಲ ಪೋಲಿಸರು ಹೇಳಿಕೊಟ್ಟಂತೆ ಚಾಕುವನ್ನು ನೋಡಿ ಗುರುತಿಸಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

50. ಮು.ಮಾ-14 ಮತ್ತು 15ರ ತರಹದ ಬಟ್ಟೆಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ ಎಂದರೆ ಸರಿ ಆದರೆ ಮು.ಮಾ-14 ಮತ್ತು 15 ನನ್ನ ಬಟ್ಟೆಗಳಾಗಿದ್ದು ನಾನು ಪೋಲಿಸರಿಗೆ ಹಾಜರುಪಡಿಸಿದ್ದು ಅವು ಮಾರುಕಟ್ಟೆಯಲ್ಲಿ ಸಿಗುವುದಿಲ್ಲ. ನಾನು ಯಾವುದೇ ಬಟ್ಟೆಗಳನ್ನು ಹಾಜರುಪಡಿಸಿರಲಿಲ್ಲ ಬಟ್ಟೆಗಳು ರಕ್ತವಾಗಿರಲಿಲ್ಲ ಘಟನೆ ಸಮಯದಲ್ಲಿ ಮು.ಮಾ-14 ಮತ್ತು 15ನ್ನು ನಾನು ಧರಿಸಿರಲಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)

ಓ ಹೇ ಕೇ ಸರಿ ಇದೆ ಎಂದು ನುಡಿದಿದ್ದಾರೆ.

(ಮೋಹನ ಬಾಡಗಂಡಿ)
2ನೇ ಅಪರ ಜಿಲ್ಲಾ ಮತ್ತು ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.